ಗುಬ್ಬಿ ತಾಲ್ಲೂಕು ಇಟಗೂರಿನಲ್ಲಿ ಪ್ರೌಢಶಾಲೆಯನ್ನು ತೆರೆಯುವುದು

೧೦೫೪. ಶ್ರೀ ಜಿ. ಎಸ್. ಶಿವನಂಜಪ್ಪ, (ಗುಬ್ಬಿ).— ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

೧. ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕು ಇಟಗೂರು ಗ್ರಾಮದಲ್ಲಿ ಪ್ರೌಢಶಾಲೆಯನ್ನು ತೆರೆಯಲು ಅರ್ಜಿಗಳೇನಾದರೂ ಬಂದಿದೆಯೇ ?

೨. ಹಾಗಿದ್ದಲ್ಲಿ ಇಟಗೂರಿನಲ್ಲಿ ಪ್ರೌಢಶಾಲೆಯನ್ನು ಪ್ರಾರಂಭಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಕೆ. ಎಚ್. ರಂಗನಾಥ್ (ಶಿಕ್ಷಣ ಸಚಿವರು).—

೧) ಇಲ್ಲ

೨) ಉದ್ಭವಿಸುವುದಿಲ್ಲ.

ಶ್ರೀ ಜಿ. ಎಸ್. ಶಿವನಂಜಪ್ಪ.— ಮಾನ್ಯ ಅಧ್ಯಕ್ಷರೇ, ಉತ್ತರವನ್ನು ನೋಡಿದರೆ ನನಗೆ ನಗು ಬರುತ್ತದೆ. ನಾನಂ ಇದೇ ಅಸೆಂಬ್ಲಿಯಲ್ಲಿ ತಮ್ಮ ಮೂಲಕ ಒಂದು ಅರ್ಜಿಯನ್ನು ಸಲ್ಲಿಸಿದ್ದೆ. ಈ ಗ್ರಾಮದಲ್ಲಿ ಪ್ರೌಢಶಾಲೆಯನ್ನು ಪ್ರಾರಂಭಿಸಿ, ಸುತ್ತಮುತ್ತಲಿನ ೧೫–೨೦ ಹಳ್ಳಿಗಳ ಜನರ ಬೇಡಿಕೆಯನ್ನು ಈಡೇರಿಸಿಕೊಡಬೇಕು ಎಂದು ಅರ್ಜಿಯನ್ನು ಸಲ್ಲಿಸಿದ್ದೆ. ೧೯೮೮ರ ಅರ್ಜಿಗಳ ಸಮಿತಿಯ ಟನೇ ವರದಿಯಲ್ಲೂ ಇದು ಪ್ರಸ್ತಾಪವಾಗಿ, ಸರ್ಕಾರಕ್ಕೆ ಶಿಫಾರಸ್ ಮಾಡಿ ಕಳುಹಿಸಿದ್ದಾರೆ. ಹೀಗಿದ್ದರೂ ಕೂಡ, ಅರ್ಜಿಗಳು ಬಂದಿಲ್ಲ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಇದನ್ನು ಹೇಗೆ ಸಮರ್ಥನೆ ಮಾಡಿಕೊಳ್ಳುವುದು ? ಅರ್ಜಿಗಳ ಸಮಿತಿಯ ವರದಿಯಲ್ಲಿ ಈ ವಿಷಯ ಬಂದಿದೆ, ಇದನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ. ಈ ವಿಷಯವನ್ನು ಸಭೆಯಲ್ಲಿ ಈ ರೀತಿ ಲಘುವಾಗಿ ತೆಗೆದುಕೊಳ್ಳುವುದಾದರೆ, ಸರ್ಕಾರಕ್ಕೆ ಬಹಳ ಕಷ್ಟವೆಂದು ಭಾವಿಸುತ್ತೇನೆ. ಏಕೆಂದರೆ, ಈ ಸಮಸ್ಯೆಯನ್ನು ಬಗೆಹರಿಸಿದಂತಾಗುವುದಿಲ್ಲ. ಮಾನ್ಯ ಮಂತ್ರಿಗಳಿಗೆ ಅರ್ಜಿಗಳ ಸಮಿತಿಯ ವರದಿಯನ್ನೂ ಕೊಡುತ್ತೇನೆ. ದಯಮಾಡಿ ಮಾನ್ಯ ಮಂತ್ರಿಗಳು ಇಟಗೂರು ಗ್ರಾಮದಲ್ಲಿ ಹೈಸ್ಕೂಲು ಮಂಜೂರ್ಮಾಡುವುದಕ್ಕೆ ದೊಡ್ಡ ಮನಸ್ಸು ಮಾಡಬೇಕು. ಅರ್ಜಿಗಳ ಸಮಿತಿಯ ವರದಿಯಲ್ಲಿ ಸರ್ಕಾರಕ್ಕೆ ಶಿಫಾರಸ್ ಮಾಡಿ ಕಳುಹಿಸಿದ್ದಾರೆ. ಆದರೆ ಉತ್ತರದಲ್ಲಿ ''ಇಲ್ಲ'' ಎಂದು ಬರೆದಿದ್ದೀರಿ. ಇದು ಸರಿಯಲ್ಲ.

ಶ್ರೀ ಕೆ. ಹೆಚ್. ರಂಗನಾಥ್.— ಕಡತದಲ್ಲಿ ಏನು ಇರುತ್ತದೆ, ಅದನ್ನು ಕೊಟ್ಟಿದ್ದೇವೆ. ಇದನ್ನು ಲಘುವಾಗಿ ತೆಗೆದುಕೊಳ್ಳಬೇಕೆಂಬುದು ಸರ್ಕಾರದ ಅಭಿಪ್ರಾಯವಲ್ಲ. ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡುತ್ತಿದ್ದಾರೆ, ಇದನ್ನು ಪರಿಶೀಲನೆ ಮಾಡಿ, ಅಲ್ಲಿ ಏನು ಅನುಕೂಲಗಳು, ಅನಾನುಕೂಲಗಳು ಇವೆ, ಎಂಬುದನ್ನು ನೋಡಿ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು.— ಉತ್ತರಗಳನ್ನು ಕೊಡತಕ್ಕ ಕಾಲದಲ್ಲಿ ಸಭೆಯ ಮೂಲಕ ಅರ್ಜಿಗಳು ಬಂದಾಗ, ಉತ್ತರವನ್ನು ಒದಗಿಸತಕ್ಕ ಅಧಿಕಾರಿಗಳು, ಬಂದಿರತಕ್ಕ ಅರ್ಜಿಗಳನ್ನೂ ಗಮನಿಸಿದರೆ, ಇಂತಹ ಅಪಾರ್ಥಗಳಿಗೆ ಕಾರಣ ಆಗುವುದಿಲ್ಲ.

ಬಿಜಾಪುರ ಜಿಲ್ಲೆಯಲ್ಲಿ ತೋಟಗಾರರು ಬೆಳೆದ ಹಣ್ಣುಗಳನ್ನು ಶೇಖರಿಸಲು ಶೀತಲ ಗೃಹ

೫೯೦. ಶ್ರೀ ಮನೋಹರ ಐನಾಪುರ (ಬಳ್ಳೊಳ್ಳಿ).—ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ಬಿಜಾಪುರ ಜಿಲ್ಲೆಯ ತೋಟದ ಬೆಳೆಗಾರರು ದ್ರಾಕ್ಷಿ, ನಿಂಬೆ ಮತ್ತು ಮತ್ತು ಇತರೇ ಹಣ್ಣುಗಳನ್ನು ಬೆಳೆಯುತ್ತಿರುವುದು ನಿಜವೇ ?

(ಆ) ಈ ತೋಟದ ಬೆಳೆಗಾರರ ಹಣ್ಣುಗಳನ್ನು ಶೇಖರಿಸಲು ಶೀತಲ ಗೃಹದ ಅನುಕೂಲತೆಯನ್ನು ಕಲ್ಪಿಸಲಾಗಿದೆಯೇ ?

(ಇ) ಇಲ್ಲದ ಪಕ್ಷದಲ್ಲಿ ಈ ವಿಷಯದಲ್ಲಿ ತೆಗೆದುಕೊಂಡ ಕ್ರಮವೇನು ?

ಶ್ರೀ ಎಸ್. ಬಂಗಾರಪ್ಪ (ಕೃಷಿ ಮತ್ತು ತೋಟಗಾರಿಕೆ ಸಚಿವರು)....

(ಅ) ಹೌದು.

(ಆ) ಇಲ್ಲ.

(ಇ) ಇಲ್ಲ. ಆದರೆ ಬಿಜಾಪುರ ಜಿಲ್ಲಾ ಪರಿಷತ್‌ಗೆ ೧೯೯೦-೯೧ ರಲ್ಲಿ ಶೀತಲ ಗೃಹ ನಿರ್ಮಾಣಕ್ಕೆ ಸಹಾಯಧನ ಒದಗಿಸುವ ಒಂದು ಹೊಸ ಯೋಜನೆಗೆ ೩.೦೦ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಈ ಯೋಜನೆಯ ವಿಧಿ ವಿಧಾನಗಳನ್ನು ಕೈಗಾರಿಕೆ ಇಲಾಖೆ, ಬಿಜಾಪುರ ಜಿಲ್ಲಾ ಪರಿಷತ್ತು ಮತ್ತು ತೋಟಗಾರಿಕೆ ಇಲಾಖೆಗಳು ಸಂಯುಕ್ತವಾಗಿ ಪರಿಶೀಲಿಸುತ್ತಿವೆ.

ಶ್ರೀ ಬಿ. ಎಸ್. ಪಾಟೀಲ್ (ತ್ರೀ ಮನೋಹರ ಐನಾಪುರ ಬಳ್ಳೊಳ್ಳಿಯವರ ಪರವಾಗಿ).— ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಬಿಜಾಪುರ ಜಿಲ್ಲೆಗೆ ೧೯೯೦-೯೧ನೇ ಇಸವಿಯಲ್ಲಿ ಶೀತಲ ಗೃಹ ನಿರ್ಮಾಣಕ್ಕೆ ಸಹಾಯಧನ ಒದಗಿಸುವ ಹೊಸ ಯೋಜನೆಗೆ ಮೂರು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಈ ಮೂರು ಲಕ್ಷ ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡಿ ಜಿಲ್ಲಾ ಪರಿಷತ್ ವಶದಲ್ಲಿ ಕೊಟ್ಟಿದ್ದಾರೆಯೇ ಅಥವಾ ಇನ್ನೂ ಬಿಡುಗಡೆ ಮಾಡುವ ಹಂತದಲ್ಲಿ ದೆಯೇ ಹೇಗೆ ಎಂದು ತಿಳಿಸಬೇಕು.

ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ, ಬಿಜಾಪುರ ಜಿಲ್ಲೆಯಲ್ಲಿ ತೋಟಗಾರಿಕೆಗೆ ಉತ್ಕೃಷ್ಟವಾದ ಹವಾಮಾನ ಇದೆ. ಅಲ್ಲಿ ಬೆಳೆದಂಥ ದ್ರಾಕ್ಷಿ ನಮ್ಮ ರಾಜ್ಯದಲ್ಲೇ ಅತ್ಯಂತ ಸಿಹಿಯಾದಂಥ ದ್ರಾಕ್ಷಿ. ಇದಲ್ಲದೆ ದಾಳಿಂಬೆ, ನಿಂಬೆ ಹಾಗೂ ತೋಟಗಾರಿಕೆಗೆ ಸಂಬಂಧಿಸಿದ ನಾನಾ ರೀತಿಯ ಹಣ್ಣು ಹಂಪಲುಗಳನ್ನು ಬಹಳ ಉತ್ತಮವಾದ ರೀತಿಯಲ್ಲಿ ಅಲ್ಲಿ ಬೆಳೆಯುತ್ತಿರುತ್ತಾರೆ. ಪ್ರತಿಸಲ ದ್ರಾಕ್ಷಿಯನ್ನು ಒಣಗಿಸಿ ಇಡುತ್ತಾರೆ. ಇದಕ್ಕೆ ಮಣೂಕ್ ಮಾಡುವುದು ಎಂದು ನಮ್ಮ ಕಡೆ ಹೇಳುತ್ತಾರೆ ಈ ರೀತಿ ಮಣೂಕ್ ಮಾಡಿದಂಥ ದ್ರಾಕ್ಷಿಯನ್ನು ಸಂಗ್ರಹ ಮಾಡಿ ಇಡುವುದಕ್ಕೆ ಕೋಲ್ಡ್ ಸ್ಟೋರೇಜ್ ಇಲ್ಲದ ಕಾರಣ ಬೆಂಗಳೂರಿಗೆ ತರಬೇಕಾದುದರಿಂದ ರೈತರಿಗೆ ಲಕ್ಷಾಂತರ ರೂಪಾಯಿ ಹಾನಿಯಾಗಿದೆ. ಆದಷ್ಟು ಬೇಗ ಈ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ. ಈ ಹಣವನ್ನು ಕೇವಲ ಕೋಲ್ಡ್ ಸ್ಟೋರೇಜ್ ಸಲುವಾಗಿ ಕೊಟ್ಟಿದ್ದೀರಾ ? ಕೊಟ್ಟಿದ್ದರೆ ಯಾವಾಗ ಕೊಟ್ಟಿದ್ದೀರಿ ? ಯಾವಾಗ ಕೆಲಸ ಪ್ರಾರಂಭ ಮಾಡುತ್ತೀರಿ ಎನ್ನುವುದನ್ನು ದಯವಿಟ್ಟು ಹೇಳಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಹಣ್ಣು ಹಂಪಲುಗಳನ್ನು ಬೆಳೆಯುವುದರಲ್ಲಿ ಬಿಜಾಪುರ ಜಿಲ್ಲೆ ಇತ್ತೀಚೆಗೆ ಬಹಳ ಹೆಸರಿಗೆ ಬರುತ್ತಿದೆ. ತೋಟಗಾರಿಕೆ ತಜ್ಞರ ಪ್ರಕಾರ ಕೂಡಾ ನಾವಿನಹಣ್ಣು, ಬಾಳೆಹಣ್ಣು, ನಿಂಬೆ ದ್ರಾಕ್ಷಿ ಮತ್ತೆ ಬೇರೆ ಬೇರೆ ಹಣ್ಣುಗಳನ್ನು ಪಾಗೂ ತರಕಾರಿಗಳನ್ನು ಬೆಳೆಯುವುದರಲ್ಲಿ ಬಿಜಾಪುರ ಜಿಲ್ಲೆ ಬಹಳ ಹೆಸರುವಾಸಿಯಾಗಿದೆ. ಆದರಲ್ಲೂ ಕೂಡಾ ದ್ರಾಕ್ಷಿ ಬೆಳೆಯುವ ವಿಚಾರದಲ್ಲಿ ಇತ್ತೀಚೆಗೆ ಬಹಳ ಹೆಸರಿಗೆ ಬಂದಿರತಕ್ಕಂಥ ಜಿಲ್ಲೆ ಎಂದರೆ ಬಿಜಾಪುರ ಜಿಲ್ಲೆ. ನಿನ್ನೆ ಕೂಡಾ ನಾನು ತೋಟಗಾರಿಕೆ ಇಲಾಖೆಗೆ ಸಂಬಂಧಪಟ್ಟ ಹಾಗೆ ಎರಡು ಮೂರು ಘಂಟೆಗಳ ಕಾಲ ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಿದ್ದೇನೆ. ಚರ್ಚೆ ಮಾಡಿದಂಥ ಸಂದರ್ಭದಲ್ಲಿ ಬಿಜಾಪುರ ಜಿಲ್ಲೆಗೆ ಕೋಲ್ಡ್ ಸ್ಟೋರೇಜ್ ಮತ್ತು ಸಾಯಿಲ್ ಟೆಸ್ಟಿಂಗ್ ಲ್ಯಾಬೊರೇಟರಿಗಳನ್ನು ಕೊಡಬೇಕೆಂಬ ಅಭಿಪ್ರಾಯ ಇಟ್ಟುಕೊಂಡಿದ್ದೇವೆ. ಸಾಯಿಲ್ ಟೆಸ್ಟಿಂಗ್ ಲ್ಯಾಬೊರೇಟರಿಯನ್ನು ಸೆಪರೇಟ್ ಆಗಿ ಮಾಡಬೇಕು, ಅದೂ ಇದೊಂದು ಜಿಲ್ಲೆಯಲ್ಲೇ ಅಲ್ಲ, ಪ್ರತಿ ಡಿವಿಜನ್‌ಗಾದರೂ ಒಂದೊಂದು ಇಡಬೇಕು, ರೈತರಿಗೆ ಮಣ್ಣು ಪರೀಕ್ಷೆ ಮಾಡಿಸುವುದಕ್ಕೆ ಹತ್ತಿರದಲ್ಲಿ ಅನುಕೂಲ ಒದಗಿಸಿಕೊಡಬೇಕು ಎಂದು ನಾನು ಇತ್ತೀಚೆಗೆ ಸೂಚನೆ ಕೊಟ್ಟಿದ್ದೇನೆ. ಆದರ ಬಗ್ಗೆ ಅಂತಿಮ ತೀರ್ಮಾನ ಏನು ಎನ್ನುವುದನ್ನು ನಮ್ಮ ಇಲಾಖೆಯ ಬೇಡಿಕೆಗಳು ಚರ್ಚೆಗೆ ಬಂದಾಗ ಕೊಡುತ್ತೇನೆ. ಮೂರು ಲಕ್ಷ ರೂಪಾಯಿಗಳನ್ನು ಬಿಜಾಪುರ ಜಿಲ್ಲೆಗೆ ಪ್ರೊವಾಯ್ಸ್ ಮಾಡಿರುತ್ತೇವೆ, ಹಣ ಹೋಗಿದೆಯೇ ಇಲ್ಲವೇ, ಹೋಗಿದ್ದರೆ ಯಾವ ತಾರೀಖು, ಯಾವ ಮಟ್ಟದಲ್ಲಿ ಇಡೆ ಎಂಬುದನ್ನು ತಿಳಿದು ಹೇಳುತ್ತೇನೆ.

ಇದರ ಬಗ್ಗೆ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಡಿಪಾರ್ಟ್‌ಮೆಂಟ್‌ನವರು, ಹಾರ್ಟಿಕಲ್ಚರಲ್ ಡಿಪಾರ್ಟ್‌ಮೆಂಟ್‌ನವರು, ಜಿಲ್ಲಾ ಪರಿಷತ್‌ನವರು ಇವರೆಲ್ಲರೂ ಸೇರಿ ಸಭೆ ಮಾಡಿದ್ದಾರೆ. ಅವರ ಅಭಿಪ್ರಾಯದ ಪ್ರಕಾರ ಇದಕ್ಕೆ ಕೊಟ್ಟಿರುವ ಹಣ ಸಾಕಾಗುವುದಿಲ್ಲ. ಇದನ್ನು ಸ್ಟೇಟ್ ಸೆಕ್ರೆಟರಿಯನ್ನಲ್ಲಿ ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ ಶೀತಲ ಗೃಹ ನಿರ್ಮಾಣವಾದರೂ ಸಹ ಆದರಲ್ಲಿ ಹಣ್ಣು, ಹಂಪಲುಗಳನ್ನು ಎಷ್ಟು ದಿವಸ ಇಡುವುದಕ್ಕೆ ಸಾಧ್ಯವೋ ಅಷ್ಟೇ ದಿವಸ ಮಾತ್ರ ಇಡಬೇಕಾಗುತ್ತದೆ.

ಲಾರಿ ಮೇಲೆ ಹಾಕಿ ಕಳುಹಿಸಬೇಕಾದರೂ ಶೀತಲ ವ್ಯವಸ್ಥೆಯ ಸೌಲಭ್ಯದ ಒಳಗೇ ಲಾರಿ ಮೇಲೆ ಹಾಕಿ ಕಳುಹಿಸಬೇಕಾಗುತ್ತದೆ. ಇದನ್ನು ಒಂದು ದಿವಸ ತಡಮಾಡಿದರೂ ಸಹ ಹಾಳಾಗುವ ಸಂದರ್ಭ ಬರುತ್ತದೆ. ಏತಕ್ಕೆಂದರೆ ಹಣ್ಣುಗಳು ಅವೆಲ್ಲಾ ಪೆರಿಷಬೆಲ್ ಐಟಮ್ಸ್. ಈ ದೃಷ್ಟಿಯಿಂದ ಈ ಹಣ್ಣವನ್ನು ರಾಜ್ಯಮಟ್ಟದಲ್ಲಿ ತಂದು ಇದನ್ನು ಮಾಡಬೇಕೆಂದು ಏನು ಜಿಲ್ಲಾ ಪರಿಷತ್‌ನವರು ಸಭೆ ಮಾಡಿ ಕಳುಹಿಸಿಕೊಟ್ಟಿದ್ದಾರೆ. It is under serious consideration of the Government ಈ ಹಣ ಯಾವಾಗ ಕಳುಹಿಸಿದ್ದಾರೆ, ಬಿಟ್ಟಿದ್ದಾರೆ ಎಂಬ ವಿವರವನ್ನು ನಾನಂ ಆ ನಂತರ ಕೊಡುತ್ತೇನೆ.

ಶ್ರೀ ಬಿ. ಎಸ್. ಪಾಟೀಲ್.—ಮಾನ್ಯ ಮಂತ್ರಿಗಳು ಬಿಜಾಪುರದಲ್ಲಿ ಮಣ್ಣು ಪರೀಕ್ಷಾ ಘಟಕವನ್ನು ಸ್ಥಾಪನೆ ಮಾಡುತ್ತೇವೆಂದು ಹೇಳಿದ್ದಾರೆ, ಬಹಳ ಸಂತೋಷ. ಎರಡು ವರ್ಷಗಳ ಹಿಂದೆ ಮಣ್ಣು ಪರೀಕ್ಷೆ ಮಾಡುವ ಕೇಂದ್ರ ಬಿಜಾಪುರದಲ್ಲಿತ್ತು. ಅದನ್ನು ತೆಗೆದು ಜಮಖಂಡಿಗೆ ಶಿಫ್ಟ್ ಮಾಡಿರುತ್ತಾರೆ. ಜಿಲ್ಲಾ ಕೇಂದ್ರದಲ್ಲಿದ್ದ ಇದನ್ನು ತಾಲ್ಲೂಕು ಕೇಂದ್ರಕ್ಕೆ ಬಯ್ಯುವುದು ಇದು ಮೊದಲನೇ ಸಲ ನಾನು ನೋಡಿದ್ದು. ನಾನು ಬೇರೆಲ್ಲೂ ಇದನ್ನು ನೋಡಿಲ್ಲ. ಮಾನ್ಯ ಮಂತ್ರಿಗಳನ್ನು ಅದನ್ನು ಮಾಡುತ್ತೇವೆಂದು ಹೇಳಿದ್ದಾರೆ, ಬಹಳ ಸಂತೋಷ. ಆದರ ಜೊತೆಗೆ ಮಾನ್ಯ ಮಂತ್ರಿಗಳು ಹೇಳಿದ ಹಾಗೆ, ನಿಂಬೆ ಹಣ್ಣನ್ನು ನಮ್ಮ ಜಿಲ್ಲೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಾರೆ. ಒಂದೊಂದು ಸಲ ನಿಂಬೆಗೆ ಸರಿಯಾದ ಧಾರಣೆ ಇಲ್ಲವೆಂದು ಬೆಳೆದುದನ್ನು ತಿಪ್ಪೆಗೆ ಹಾಕುವ ಪ್ರಸಂಗ ಬರುತ್ತಿದೆ. ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದರ ಬಗ್ಗೆ ಒಂದು ಪ್ರೊಸೆಸಿಂಗ್ ಯೂನಿಟ್ ಮಾಡಿ, ರಸ ತೆಗೆಯುವಂತಹದ್ದಾಗಲೀ, ಪೌಡರ್ ಮಾಡುವಂತಹ ಯೂನಿಟ್‌ನ್ನಾಗಲೀ ಸ್ಥಾಪನೆ ಮಾಡಿದರೆ ರೈತರಿಗೆ ಹೆಚ್ಚಿನ ಅನುಕೂಲವಾಗುತ್ತದೆ. ಈ ದಿಸೆಯಲ್ಲಿ ಸರಕಾರ ಏನಾದರೂ ವಿಚಾರ ಮಾಡಿದೆಯೇ ಎಂಬುದನ್ನು ತಿಳಿಸಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಗೆ ನಾನು ತತಕ್ಷಣ ಉತ್ತರ ಕೊಡುವುದಕ್ಕೆ ಬರುವುದಿಲ್ಲ. ಜಿಲ್ಲಾ ಪರಿಷತ್ತಿನವರು ಇದನ್ನು ಸ್ಟೇಟ್ ಸೆಕ್ಟಾರ್‌ನಲ್ಲಿ ತೆಗೆದುಕೊಳ್ಳಬೇಕೆಂದು ಮತ್ತು ಇದಕ್ಕೆ ಹಣ ಜಾಸ್ತಿ ಬೇಕಾಗುತ್ತದೆ ಎನ್ನುವ ಅಭಿಪ್ರಾಯವನ್ನು ಇಟ್ಟಿದ್ದಾರೆ. ಮಾನ್ಯ ಸದಸ್ಯರ ಅಭಿಪ್ರಾಯವನ್ನು ನಾನು ಒಪ್ಪಿಕೆ ಇಳ್ಳುತ್ತೇನೆ. ರೈತ ಬೆಳೆ ಬೆಳೆಯುತ್ತಾನೆ. ಆ ಬೆಳೆಯನ್ನು ಸಂರಕ್ಷಣೆ ಮಾಡಿ ಅವನಿಗೆ ಮಾರ್ಕೆಟಿಂಗ್ ಫೆಸಿಲಿಟಿ ಮಾಡಿ ಕೊಡದಿದ್ದರೆ ಹೇಗೆ? ಮಾರ್ಕೆಟಿಂಗ್ ವ್ಯವಸ್ಥೆ ಇಲ್ಲದಿದ್ದರೆ ಅವನು ಶೋಷಣೆಗೆ ಒಳಪಡುತ್ತಾನೆ. ರೈತನು ಬೆಳೆ ಬೆಳೆಯಲು ಸಹಾಯ ಮಾಡುತ್ತೇವೆ. ನಾವು ಅದರ ಜೊತೆ ಜೊತೆಯಲ್ಲಿಯೇ ಮಾರ್ಕೆಟಿಂಗ್ ವ್ಯವಸ್ಥೆ ಸಹ ಮಾಡಿಕೊಡಬೇಕಾಗುತ್ತದೆ. ಇಲ್ಲದಿದ್ದರೆ ನಮ್ಮ ಟೋಟಲ್ ಪ್ರೊಡಕ್ಷನ್‌ಗೆ ಪೆಟ್ಟು ಬೀಳುತ್ತದೆ. ಅದಕ್ಕೆ ನಾವು ಈ ಬಗ್ಗೆ ಒಂದು ಚರ್ಚೆ ಮಾಡಬೇಕಾಗುತ್ತದೆ. ಇದನ್ನು ನಮ್ಮ ಒಂದೇ ಇಲಾಖೆ ಮಾಡುವಂತೆ ಇಲ್ಲ. ಇಂಡಸ್ಟ್ರೀಸ್ ಇಲಾಖೆಯವರು ಮತ್ತು ಜಿಲ್ಲಾ ಪರಿಷತ್ತಿನವರು ಮತ್ತು ಸರ್ಕಾರ ಹಾಗೂ ಸಂಬಂಧಪಟ್ಟ ಇಲಾಖೆಯವರಂ ಚರ್ಚೆ ಮಾಡಬೇಕಾಗುತ್ತದೆ. ತಮ್ಮ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಚರ್ಚೆ ಮಾಡುತ್ತೇವೆ.

ಶಿಕ್ಷಕರಂಗಳ ನೇಮಕಾತಿಯಂ ಕುರಿತು

೯೨೨ ಶ್ರೀ ಕೆ ಹೆಚ್. ಹನುಮೇಗೌಡ (ಹಾಸನ).—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಾಸನ ಜಿಲ್ಲಾ ಪರಿಷತ್ ವತಿಯಿಂದ ಕಳೆದ ಒಂದು ವರ್ಷದಿಂದ ಆಯ್ಕೆ ಮಾಡಲಾದ ಉಪಾಧ್ಯಾಯರುಗಳ ಸಂಖ್ಯೆ ಎಷ್ಟು ?

ಆ) ಆ ಪೈಕಿ ಎಷ್ಟು ಜನ ಉಪಾಧ್ಯಾಯರುಗಳಿಗೆ ನೇಮಕಾತಿ ಆದೇಶ ಕೊಟ್ಟಿದ್ದಾರೆ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಮಂತ್ರಿಗಳು)—

ಅ) ೧೦೦೩

ಆ) ೩೮೪

ಶ್ರೀ ಕೆ. ಹೆಚ್. ಹನುಮೇಗೌಡ.—ಮಾನ್ಯ ಅಧ್ಯಕ್ಷರೇ, ಆಪರೇಷನ್ ಬ್ಲಾಕ್ ಬೋರ್ಡ್ ಸ್ಕೀಮ್‌ನಲ್ಲಿ ೧೧೦೦ ಜನ ಉಪಾಧ್ಯಾಯರನ್ನು ಹಾಸನ ಜಿಲ್ಲಾ ಪರಿಷತ್ತಿನವರು ಸೆಲೆಕ್ಟ್ ಮಾಡಿದ್ದಾರೆ. ಆದರಲ್ಲಿ ೩೮೩ ಜನರು ಮಾತ್ರ ಅಪಾಯಿಂಟ್ ಆಗಿದ್ದಾರೆ ಉಳಿದವರು ಅಪಾಯಿಂಟ್ ಆಗಿಲ್ಲ ಎಂದು ಗೊತ್ತಾಗಿದೆ. ಉಳಿದವರನ್ನು ಯಾವಾಗ ಅಪಾಯಿಂಟ್ ಮಾಡಿಕೊಳ್ಳುತ್ತೀರಿ ?